## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 87/2021**

**ಚಾ.ಸಾ. - 7**
**ಪ್ರಾ.ಸಾ. - 6**

**ಸಾಕ್ಷಿದಾರರ ಹೆಸರು** : ಸಿದ್ದಪ್ಪ ಬಸ್ಸಪ್ಪ ತೋಟಗಿ

**ಸಾಕ್ಷಿದಾರರ ವಯಸ್ಸು** : 27 ವರ್ಷ

**ಸಾಕ್ಷಿದಾರರ ಉದ್ಯೋಗ**: ಕೂಲಿ

**ಸಾಕ್ಷಿದಾರರ ವಿಳಾಸ** : ಸಂಪಗಾಂವ

**ಪ್ರಮಾಣ ವಚನ ಮಾಡಿದ ದಿನಾಂಕ : 03.07.2025**

**ಮುಖ್ಯ ವಿಚಾರಣೆ: ಎಪಿಪಿ ಅವರಿಂದ:**

ನನ್ನ ಸಮಕ್ಷಮ ಆರೋಪಿತರು ಹಾಗೂ ಚಾಸಾ 1 ಮತ್ತು 6 ರವರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ, ಹಾಗೂ ಯಾವುದೇ ಹಾಥ ನಕಾಶೆಯನ್ನು ತೆಗೆದಿರುವುದಿಲ್ಲ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ 2 ಎಂದು ಗುರುತಿಸಲಾದಗಿದೆ, ನನ್ನ ಸಹಿಯನ್ನು ನಿಶಾನೆ ಪಿ 2ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಹಾಥ ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ 3 ಎಂದು ಗುರುತಿಸಲಾದಗಿದೆ, ನನ್ನ ಸಹಿಯನ್ನು ನಿಶಾನೆ ಪಿ 3ಸಿ ಎಂದು ಗುರುತಿಸಲಾಯಿತು. ನಿಶಾನೆ ಪಿ 2 ಮತ್ತು 3 ರಲ್ಲಿ ಬರೆದ ಅಂಶ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ 4 ಮತ್ತು 5 ಎಂದು ಗುರುತಿಸಲಾಗಿದೆ. ಸದರಿ ಪೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಸಾಕ್ಷಿಯು ಅಭಿಯೋಜನ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಕೋರಿಕೊಂಡಿರುವರು .

ಕಡತವನ್ನು ಪರಿಶೀಲಿಸಲಾಯಿತು. ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು ).

**ಪಾಟೀ ಸವಾಲುಃ ಎಪಿಪಿ ಅವರಿಂದ ಃ**

ದಿಃ 10.03.2020 ರಂದು ನಮ್ಮ ಊರಿನಲ್ಲಿ ಹೋಳಿ ಹಬ್ಬದ ನಿಮಿತ್ತ ಬಣ್ಣದಾಟ ಇದ್ದುದರಿಂದ ಬೆಳ್ಳಿಗ್ಗೆ 10.00ಗಂಟೆ ಸುಮಾರಿಗೆ ಬಣಗಾರ ಗಲ್ಲಿ ಗೌಂಟನ ಕಡೆಗೆ ಹೋಗಿ ಬಣ್ಣದಾಟದಲ್ಲಿ ತೊಡಗಿದ್ದೇನು ಎಂದರೆ ಸರಿ. ಚಾಸಾ 1, 6,8 ಮತ್ತು 9 ರವರು ಸಹ ಆಟದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 6 ರವರು ಜಗಳ ಬಿಡಿಸಲು ಮುಂದಾದಾಗ ಅವರಿಗೂ ಸಹ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಹಾಗೂ ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಅಲ್ಲಿಯೇ ಇದ್ದ ಕಬ್ಬಿಣದ ಸ್ಟ್ಯಾಂಡ್ ತೆಗೆದುಕೊಂಡು ಚಾಸಾ 1 ರವರಿಗೆ ಬಿಸಿ ಒಗೆದು ಅವರ ತಲೆಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿಯು ಚಾಸಾ 6 ರವರಿಗೆ ತನ್ನ ಬಳಿ ಇದ್ದ ಕಾಳು ತೆಗೆಯುವ ಕಬ್ಬಿಣದ ಬಂಬಿನಿಂದ ಗದ್ದಕ್ಕೆ ತಿಡಿದನು ಎಂದರೆ ಸರಿಯಲ್ಲ. ಆಗ ನಾನು, ಚಾಸಾ 8 ಮತ್ತು 9 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಷಯವನ್ನು ಚಾಸಾ 10 ರವರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಅವರು ಸ್ಥಳಕ್ಕೆ ಬಂದು ಚಾಸಾ 1 ಮತ್ತು 6 ರವರನ್ನು ಆಸ್ಪತ್ರೆಗೆ ಕರೆದದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಶಾನೆ ಪಿ 9 ಎಂದು ಗುರುತಿಸಲಾಯಿತು.

ದಿನಾಂಕ 11.03.2020 ರಂದು ಬೆಳಿಗ್ಗೆ 09.00 ರಿಂದ 10.00 ಸಮಯದಲ್ಲಿ ಪೋಲಿಸರು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಸಂಪಗಾವ ಗ್ರಾಮದ ಘಟನಾ ಸ್ಥಳದಲ್ಲಿ ನಿಶಾನೆ ಪಿ 2 ರಂತೆ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುವರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ 3 ರಂತೆ ಹಾತ ನಕಾಶೆಯನ್ನು ತಯಾರಿಸಿ ನನ್ನ ಸಹಿಯನ್ನು ಪಡೆದುಕೊಂಡಿರುವರು ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಗೆ ಸಂಬಂಧಿಸಿದಂತೆ ನಿಪಿ 4 ಮತ್ತು 5 ರಂತೆ ಫೋಟೊಗಳನ್ನು ತೆಗೆದಿರುವರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ  ಆರೋಪಿ ಪರ ಶ್ರೀ ಎಸ್ ಸಿ ಜೆ ವಕೀಲರಿಂದಃ**

ಸಂಪಗಾಂವ ಗ್ರಾಮದಲ್ಲಿ ಮಹೇಶ ಬಸ್ಸಪ್ಪ ವನ್ನೂರ ಎಂಬ ವ್ಯಕ್ತಿ ಇರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ